**<u>ದಿನಾಂಕಃ 30.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು:- 4ನೇ ಪ್ರತಿವಾದಿಗಳ ವಾರಸುದಾರರ ಪರ ಶ್ರೀ ಕೆ.ಪಿ.ಎಂ. ಪರವಾಗಿ ಶ್ರೀಮತಿ ಎಸ್.ಜೆ ವಕೀಲರಿಂದಃ</u>**

1) 1ನೇ ಪ್ರತಿವಾದಿ ಮರ ಕಡಿದು ತೊಂದರೆ ಕೊಡುತ್ತಿದ್ದ ಕಾರಣ ಈ ದಾವೆಯನ್ನು ಹೂಡಲಾಗಿದೆ. ದಾವಾ ಸ್ವತ್ತು ನನ್ನ ಅಜ್ಜಿಯ ಮೂಲಕ ನನ್ನ ತಾಯಿ ವಾದಿಗೆ ಬಂದಿತ್ತು. ಆ ರೀತಿ ನನ್ನ ಅಜ್ಜಿಯ ಮೂಲಕ ದಾವಾ ಸ್ವತ್ತು ನನ್ನ ತಾಯಿಗೆ ಬಂದಿತ್ತು ಎಂದು ತೋರಿಸಲು ನಾನು ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನನ್ನ ಕುಟುಂಬದ ವಂಶವೃಕ್ಷವನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತಿನ ಸರ್ವೆ ನಂಬರ್ 98/1ಬಿ ಆಗಿದ್ದು ಅದರಲ್ಲಿ 1 ಎಕರೆ 4 ಗುಂಟೆ ಜಮೀನು ಇರುತ್ತದೆ ಮತ್ತು ಸರ್ವೆ ನಂಬರ್ 99/1 ರಲ್ಲಿ 7 ಗುಂಟೆ ಜಮೀನು ಇರುತ್ತದೆ ಮತ್ತು ಅವುಗಳು ಹೆಚ್.ಬ್ಯಾಡರಹಳ್ಳಿ ಗ್ರಾಮದಲ್ಲಿ ಇರುತ್ತವೆ. ದಾವಾ ಸ್ವತ್ತುಗಳು ಒಟ್ಟಿಗೆ ಇದ್ದು ಅವುಗಳ ಪೂರ್ವ ದಿಕ್ಕಿಗೆ ಚನ್ನಪ್ಪ ಮತ್ತು ಕೆಂಪಯ್ಯ ರವರ ಜಮೀನು, ಪಶ್ಚಿಮಕ್ಕೆ ಶಿವಲಿಂಗೇಗೌಡ ಮತ್ತು ಕಾಡೇಗೌಡ ರವರ ಜಮೀನು, ಉತ್ತರಕ್ಕೆ ಚನ್ನೇಗೌಡ ಮತ್ತು ಚಿಕ್ಕಕರಿಯಪ್ಪರವರ ಜಮೀನು ಹಾಗೂ ದಕ್ಷಿಣಕ್ಕೆ ಬಿ.ಎಸ್. ಪುಟ್ಟಸ್ವಾಮಿಗೌಡ ರವರ ಜಮೀನು ಇರುತ್ತದೆ. ನನ್ನ ಅಜ್ಜಿಯ ಕುಟುಂಬಕ್ಕೆ ಸೇರಿದ ವಂಶವೃಕ್ಷವನ್ನು ಹಾಜರುಪಡಿಸಿರುತ್ತೀರಾ ಎಂದು ಸಾಕ್ಷಿಯು ಸುಮ್ಮನೆ ನಿಂತಿರುತ್ತಾರೆ.

2) ನನ್ನ ತಾಯಿಯ ಹೆಸರು ಲಕ್ಷ್ಮಿದೇವಮ್ಮ (ವಾದಿ). ನನ್ನ ತಂದೆಯ ಹೆಸರು ದೊಡ್ಡತಿಮ್ಮೇಗೌಡ. ನನ್ನ ತಾಯಿ ಲಕ್ಷ್ಮಿದೇವಮ್ಮ ರವರ ತಂದೆಯ ಹೆಸರು ಕೆಂಪಯ್ಯ. ನನ್ನ ತಾಯಿ ಲಕ್ಷ್ಮಿದೇವಮ್ಮ ರವರ ತಾಯಿಯ ಹೆಸರು ದೇವೀರಮ್ಮ. ನನ್ನ ತಂದೆ ದೊಡ್ಡತಿಮ್ಮೇಗೌಡನ ತಂದೆ ಹೆಸರು ಹೊನ್ನಯ್ಯ. ಸದರಿ ಹೊನ್ನಯ್ಯನಿಗೆ ಇಬ್ಬರು ಮಕ್ಕಳು. ಅವರುಗಳೆಂದರೆ ದೊಡ್ಡತಿಮ್ಮೇಗೌಡ ಮತ್ತು ಚಿಕ್ಕತಿಮ್ಮೇಗೌಡ. ನನ್ನ ತಂದೆ ದೊಡ್ಡತಿಮ್ಮೇಗೌಡನಿಗೆ ನಾವು ಇಬ್ಬರು ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು.

3) ನನ್ನ ಅಜ್ಜಿ ದೇವೀರಮ್ಮರವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ನನ್ನ ತಾಯಿಯ ತಂದೆಯ ಮನೆಯ ಕಡೆಯಿಂದ ನನ್ನ ತಾಯಿಗೆ ಬಂದಿರುತ್ತವೆ. ಸದರಿ ಸ್ವತ್ತುಗಳು ನನ್ನ ಅಜ್ಜಿಗೆ ಆಕೆಯ ತಂದೆಯ ಕಡೆಯಿಂದ ಬಂದಿದ್ದವು. ದಾವಾ ಸ್ವತ್ತುಗಳು ನನ್ನ ಅಜ್ಜಿ ದೇವೀರಮ್ಮ ರವರ ತಂದೆಗೆ ಸೇರಿದ

ಆಸ್ತಿಗಳು ಎಂದು ಸೂಚಿಸುವುದು ಸರಿಯಲ್ಲ. ನನ್ನ ತಾಯಿ ಲಕ್ಷ್ಮಿದೇವಮ್ಮ ರವರ ತಂದೆಯ ಹೆಸರು ಕೆಂಪಯ್ಯ. ನನ್ನ ಅಜ್ಜಿ ದೇವೀರಮ್ಮರವರ ತಂದೆಯ ಹೆಸರು ತಿಬ್ಬೇಗೌಡ. ನನ್ನ ತಾತ ಕೆಂಪಯ್ಯ ರವರಿಗೆ ಒಬ್ಬಳೇ ಹೆಂಡತಿ. ಸದರಿ ಕೆಂಪಯ್ಯ ರವರಿಗೆ ಒಬ್ಬಳೇ ಮಗಳು. ಸದರಿ ನನ್ನ ತಾತ ಕೆಂಪಯ್ಯ ರವರಿಗೆ ಮೂರು ಜನ ಹೆಂಡತಿಯರು ಎಂದರೆ ನನಗೆ ಗೊತ್ತಿಲ್ಲ.

3) ದಾವಾ ಸ್ವತ್ತುಗಳನ್ನು ಯಾವುದೇ ದಾಖಲೆಯ ಮೂಲಕ ನನ್ನ ಅಜ್ಜಿಗೆ ಬರೆದುಕೊಟ್ಟಿರುವುದಿಲ್ಲ. ದಾವಾ ಸ್ವತ್ತುಗಳಲ್ಲಿ ನಾವು ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಅಕ್ಕಪಕ್ಕದ ಜನರನ್ನು ಕರೆದು ಸಾಕ್ಷ್ಯ ವಿಚಾರಣೆ ಮಾಡಿಸುತ್ತೇನೆ. ನಾನು ಈ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ಪ್ರಸ್ತುತ ಪ್ರಕರಣವನ್ನು ನಾನು ರಮೇಶ, ರವಿ ಮತ್ತು ಪುಟ್ಟಕ್ಕ ರವರ ಕುಟುಂಬದವರ ಮೇಲೆ ಹೂಡಿರುತ್ತೇನೆ.

4) ಅಸಲು ದಾವಾ ಸಂಖ್ಯೆ 176/1997 ರ ಪ್ರಕರಣವನ್ನು ನನ್ನ ಅಜ್ಜಿ ದೇವೀರಮ್ಮ ರವರು ಜಮೀನಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಹೇಳಿ ಹೂಡಿದ್ದರು. ಸದರಿ ಪ್ರಕರಣದಲ್ಲಿ ನನ್ನ ಅಜ್ಜಿ ಯಾವ ಯಾವ ದಾಖಲೆಗಳನ್ನು ಸಲ್ಲಿಸಿದ್ದರು ಎಂದು ನನಗೆ ಗೊತ್ತಿಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಕಾರಣ ಇಲ್ಲದ ಮೇರೆಗೆ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**